**ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು**
**(3ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ)**
**ಎಂ.ವಿ.ಸಿ ನಂ. 2317/2024**

| | |
|---|---|
| **ಹೆಸರು** | ಪ್ರಕಾಶ್ |
| **ತಂದೆಯ ಹೆಸರು** | ಲೇಟ್ ಕೆಂಚಹನುಮಯ್ಯ |
| **ವಯಸ್ಸು** | *53* ವರ್ಷ |
| **ಉದ್ಯೋಗ** | ಎ.ಎಸ್.ಐ, ಬ್ಯಾಟರಾಯನಪುರ ಸಂಚಾರಿ ಪೊಲೀಸ್ ಠಾಣೆ |
| **ವಾಸ ಸ್ಥಳ** | ಬೆಂಗಳೂರು |

**ಸಾಕ್ಷಿಗೆ ದಿನಾಂಕ 21.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ **ವಿಚಾರಣೆ: 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಪಿ. ವಕೀಲರಿಂದ:**

**1.** ನಾನು ಈ ದಿನ ನ್ಯಾಯಾಲಯದಿಂದ ಪಡೆದ ಸಮನ್ಸ್ ಗೆ ಪ್ರತಿಯಾಗಿ ನ್ಯಾಯಲಯಕ್ಕೆ ಹಾಜರಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡುತ್ತಿದ್ದೇನೆ.

| | |
|---|---|
| ನಿ.ಆರ್ 1 | ಕೀರ್ತಿರಾಜ್ ಸಾಕ್ಷಿದಾರರ ಹೇಳಿಕೆ |
| ನಿ.ಆರ್ 2 | ಸಾಕ್ಷಿದಾರರ ಮರುಹೇಳಿಕೆ |
| ನಿ.ಆರ್ 3 | ದೃಢೀಕರಿಸಿದ ಛಾಯಚಿತ್ರದ ಮೂರು ಪುಟಗಳು |
| ನಿ.ಆರ್ 4 | ಸಿಡಿಆರ್ |
| ನಿ.ಆರ್ 5 | ಸಿಡಿ |
| ನಿ.ಆರ್ 6 | ಎಂ.ಎಲ್.ಸಿ.ಯ ದೃಢೀಕೃತ ಪ್ರತಿ |

ಗಾಯಾಳುವಿನ ಮಗನಾದ ಮಂಜು.ಬಿ. ಎನ್ನುವವರು ದಿಃ05.03.2024 ರಂದು ಸಂಜೆ 5.30 ಅಪಘಾತಕ್ಕೆ ಸಂಬಂಧಿಸಿದಂತೆ ಬಂದು ದೂರು ನೀಡಿರುತ್ತಾರೆ. ಸದರಿ ದೂರನ್ನು ಮೊಕದ್ದಮ್ಮೆ ನಂ. 62/2024 ರಡಿಯಲ್ಲಿ ದಾಖಲಿಸಿಕೊಂಡು ಭಾರತ ದಂಡ ಸಂಹಿತೆ ಕಲಂ.279, 337 ಮತ್ತು ಮೋಟಾರು ವಾಹನ ಕಾಯಿದೆ ಕಲಂ. 134(ಎ ಮತ್ತು ಬಿ) ಸಹವಾಚಕ ಕಲಂ.187 ರಡಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತೇನೆ. ದೂರಿನಲ್ಲಿ ಮತ್ತು ಪ್ರಥಮ ವರ್ತಮಾನ ವರದಿಯಲ್ಲಿ ಅಪಘಾತಪಡಿಸಿದ ವಾಹನ ಆಟೋ ರಿಕ್ಷಾ ಅಂತ ಹೇಳಿದ್ದು, ಅದರ ನೋಂದಣಿ ಸಂಖ್ಯೆ ಹೇಳಿರುವುದಿಲ್ಲ. ಅಪಘಾತಪಡಿಸಿದ ಆಟೋರಿಕ್ಷಾವನ್ನು ಸಿಸಿಟಿವಿ ದಶ್ಯಾವಳಿ ಮತ್ತು ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆ ಮೇರೆಗೆ ಪತ್ತೆ ಮಾಡಲಾಯಿತು.

**(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ**,** ಎದುರುದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಅವಕಾಶವನ್ನು ಕೇಳಿರುತ್ತಾರೆ**,** ನೀಡಲಾಗಿರುತ್ತದೆ**.)**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎನ್.ಎಂ.ಪಿ. ವಕೀಲರಿಂದಃ**

ಅಪಘಾತ ಸ್ಥಳದಲ್ಲಿ ಪ್ರತ್ಯಕ್ಷಸಾಕ್ಷಿದಾರರಾದ ಕೀರ್ತಿರಾಜ್ ಹೆಚ್.ವಿ. ಮತ್ತು ಮನೋಜ್ ಎನ್ನುವವರು ನಡೆದುಕೊಂಡು ಹೋಗುತ್ತಿದ್ದರು. ಅವರಿಬ್ಬರು ವ್ಯಾಪಾರ ಮಾಡಿಕೊಂಡು ಇರುತ್ತಾರೆ. ಕೀರ್ತಿರಾಜ್ ಹೆಚ್.ವಿ. ರವರು ಬಾರ್ ಆ್ಯಂಡ್ ರೆಸ್ಟೋರೆಂಟ್ ನಲ್ಲಿ ಸಹ ಕೆಲಸ ಮಾಡಿಕೊಂಡು ಇರುತ್ತಾರೆ. ಧನಲಕ್ಷ್ಮೀ ಬಾರ್ ಆ್ಯಂಡ್ ರಸ್ಟೋರೆಂಟ್ ಅಪಘಾತ ಸ್ಥಳದಿಂದ ಎಷ್ಟು ದೂರು ಇದೆ ಎಂದು ಗೊತ್ತಿಲ್ಲ. ನಿ.ಆರ್ 3 ಛಾಯಚಿತ್ರಗಳಲ್ಲಿ ಪ್ರತ್ಯಕ್ಷ ಸಾಕ್ಷಿದಾರರು ನಡೆದುಕೊಂಡು ಹೋಗುತ್ತಿದದ ಬಗ್ಗೆ ಕಾಣುತ್ತಿಲ್ಲ ಎಂದರೆ ಸರಿ. ಅಪಘಾತದ ಸ್ಥಳವು ಸುಗ್ರಿವ್ ಅಪಾರ್ಟ್‌ಮೆಂಟ್ ಮುಂದೆ ಆಗಿರುತ್ತದೆ. ಸುಗ್ರಿವ್ ಅಪಾರ್ಟ್‌ಮೆಂಟ್ ನಲ್ಲಿ ಸಿಸಿ ಕ್ಯಾಮೆರಾ ಇರಲಿಲ್ಲ. ಸುಗ್ರಿವ್ ಅಪಾರ್ಟ್‌ಮೆಂಟ್ ಭದ್ರತಾ ಸಿಬ್ಬಂದಿ ಇರಲಿಲ್ಲ. ಸುಗ್ರಿವ್ ಅಪಾರ್ಟ್‌ಮೆಂಟ್ ನ ಸಿಬ್ಬಂದಿ ಯಾರು ಮುಂದೆ ಬಂದು ಹೇಳಿಕೆ

ನೀಡಿರುವುದಿಲ್ಲ. ನಾನು ವಿಚಾರಣೆ ಮಾಡಿದಾಗ ಅವರು ಯಾರು ಅಪಘಾತದ ಸಮಯದಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ದ್ವಿಚಕ್ರ ವಾಹನದ ಸಿಸಿಟಿವಿ ದೃಶ್ಯಾವಳಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಅವಶ್ಯಕತೆ ಕಂಡು ಬಂದಿಲ್ಲ. ಯುರೋಕಿಡ್ಸ್ ಸ್ಕೂಲ್ ಗೆ ಮತ್ತು ಅಪಘಾತ ಸ್ಥಳಕ್ಕೆ 50 ಮೀ. ಇರುತ್ತದೆ. ವೀಲೆಜ್ ಮಾರ್ಟ್ ಮತ್ತು ಅಪಘಾತ ಸ್ಥಳಕ್ಕೆ 150 ಮೀ. ಅಂತರ ಇರುತ್ತದೆ. ಯುರೋಕಿಡ್ಸ್ ಸ್ಕೂಲ್ ಮತ್ತು ವೀಲೆಜ್ ಮಾರ್ಟ್ ಗೆ 3-4 ತಿರುವು ಇರುತ್ತದೆ. ಅಪಘಾತ ಸಮಯದಲ್ಲಿ ಸಾಕಷ್ಟು ಆಟೋರಿಕ್ಷಾಗಳು ಸದರಿ ಮಾರ್ಗವಾಗಿ ಚಲಾಯಿಸಿರಬಹುದು ಎಂದರೆ ಸರಿ. ಸಾಕ್ಷಿ ಮುಂದುವರೆದು ಅಪಘಾತ ಪಡಿಸಿದ ಆಟೋರಿಕ್ಷಾ ವನ್ನು ಪ್ರತ್ಯಕ್ಷ ಸಾಕ್ಷಿದಾರರು ವರ್ಣಿಸಿದ ಹಾಗೂ ಸಿಸಿಟಿವಿ ದೃಶ್ಯಾವಳಿ ಕಂಡು ಬಂದ ಆಟೋಗೆ ಹೋಲಿಕೆ ಆದ್ದರಿಂದ ಸದರಿ ಆಟೋ ವಿರುದ್ದ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇವೆ. ಅಪಘಾತದ ಸಮಯಕ್ಕೂ ಮತ್ತು ಛಾಯಚಿತ್ರದಲ್ಲಿ ಇರುವ ಸಮಯಕ್ಕೂ ವ್ಯತ್ಯಾಸ ಇದೆ ಎಂದರೆ ಸರಿ. ಛಾಯಚಿತ್ರದಲ್ಲಿ 03.04.2023 ಎಂದು ಕಾಣುತ್ತದೆ ಎಂದರೆ ಸಿಸಿಟಿವಿಯಲ್ಲಿ ತಿಂಗಳು ಮತ್ತು ದಿನಾಂಕವನ್ನು ತಮ್ಮ ಇಚ್ಚೇಗೆ ಅನುಗುಣವಾಗಿ ಅಳವಡಿಸಿಕೊಂಡಿರುತ್ತಾರೆ. ನಕಾಶೆಯ ಪ್ರಕಾರ ಎರಡು ವಾಹನಗಳು ಮುಖಾಮುಖಿ ಡಿಕ್ಕಿ ಆಗಿವೆ ಎಂದರೆ ಸರಿ. ಆ ರೀತಿ ಅಪಘಾತ ಆಗಿದ್ದರೆ ಎರಡು ವಾಹನಗಳಿಗೆ ಜಖಂಗೊಂಡಿರಬೇಕು ಎಂದರೆ ಸರಿ. ಸಾಕ್ಷಿ ಮುಂದುವರೆದು ಆಟೋರಿಕ್ಷಾ ಚಾಲಕನು ಅಪಘಾತಪಡಿಸಿ ಸ್ಥಳದಲ್ಲಿ ನಿಲ್ಲಿಸದೇ ಹೋಗಿದ್ದರಿಂದ ದುರಸ್ತಿಪಡಿಸಿಕೊಂಡಿರುತ್ತಾನೆ. ಆಟೋದುರಸ್ತಿಪಡಿಸಿಕೊಂಡ ಬಗ್ಗೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ.ಐಎಂವಿ ವರದಿಯ ಪ್ರಕಾರ ದ್ವಿಚಕ್ರ ವಾಹನಕ್ಕೆ ಮುಂಭಾಗ ಮಾತ್ರ ಜಖಂ ಗೊಂಡಿದ್ದು ಮತ್ತು ಆಟೋಗೆ ಆದ ಜಖಂಗಳ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಛಾಯಚಿತ್ರಗಳಲ್ಲಿ ಆಟೋಗೆ ಜಖಂಗಳು ಆದ ಬಗ್ಗೆ ಕಂಡುಬಂದಿರುವುದಿಲ್ಲ ಎಂದರೆ ನನಗೆ ಕಂಡು ಬಂದಿರುವುದಿಲ್ಲ. ಆಟೋ ನಂ.ಕೆಎ-02-ಎಜೆ-0642 ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಸುಗ್ರಿವ್ ಅರ್ಪಾಟ್

ಮೆಂಟ್ ರವರ ಸಿಬ್ಬಂದಿ ಹೇಳಿಕೆ ಉದ್ದೇಶಪೂರ್ವಕವಾಗಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಆಟೋರಿಕ್ಷಾ ವನ್ನು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳಾಗಿ ಸೇರ್ಪಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಪೋನ್ ನಂಬರ್ ನ್ನು ಪ್ರದೇಶ ವ್ಯಾಪ್ತಿಯನ್ನು ಜಿಪಿಎಸ್ ಮುಖಾಂತರ ಪತ್ತೆಹಚ್ಚ ಬಹುದು ಎಂದರೆ ಆರೋಪಿ ತಪ್ಪೊಪ್ಪಿಕೊಂಡಿದ್ದರಿಂದ ಜಿಪಿಎಸ್ ಮೊರೆ ಹೋಗಿರುವುದಿಲ್ಲ. 1 ನೇ ಎದುರುದಾರರಿಗೂ ಮತ್ತು ಅರ್ಜಿದಾರರಿಗೆ ಪರಿಚಯ ಇರುವುದಿಲ್ಲ. ಅರ್ಜಿದಾರರ ವಾಹನ ಚಾಲನಾ ಪರವಾನಿಗೆ ಪತ್ರ ಮತ್ತು ವಾಹನದ ದಾಖಲೆಗಳ ಬಗ್ಗೆ ವಿಚಾರಣೆ ಮಾಡಿದ್ದು, ಚಾಲನಾ ಪರವಾನಿಗೆ ಪತ್ರ ಅಪಘಾತದ ಸಮಯದಲ್ಲಿ ಕಳೆದು ಹೋಗಿರುತ್ತದೆ ಎಂದು ಅರ್ಜಿದಾರರು ಹೇಳಿರುತ್ತಾರೆ. ಮುಚ್ಚಳಿಕೆ ಪತ್ರವನ್ನು ಅಪಘಾತಪಡಿಸಿದ ವಾಹನದ ಮಾಲೀಕರಿಂದ ಪಡೆದುಕೊಳ್ಳುತ್ತೇವೆ ಆದರೆ ಗಾಯಾಳುವಿನ ವಾಹನದ ಮುಚ್ಚಳಿಕೆ ಪತ್ರ ಪಡೆದುಕೊಂಡಿರುವುದಿಲ್ಲ. ಪ್ರತ್ಯಕ್ಷ ಸಾಕ್ಷಿ ಮತ್ತು ದೂರುದಾರ ಅರ್ಜಿದಾರರು ಹೆಲ್ಮೆಟ್ ಧರಿಸಿರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ನಿ.ಆರ್-6 ಎಂ.ಎಲ್.ಸಿ. ಯಲ್ಲಿ ಆಟೋರಿಕ್ಷಾ ನಂಬರ್ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಅನುಕೂಲವಾಗಲೇಂದು ಆಟೋವನ್ನು ಪ್ರಕರಣದಲ್ಲಿ ಸಿಲುಕಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ1 ನೇ ಎದುರುದಾರರ ಪರ ಶ್ರೀ ಎ.ಸಿ.ಎನ್. ವಕೀಲರಿಂದಃ</u>**

ಅಪಘಾತ ಸ್ಥಳವು ಅಪಾರ್ಟ್‌ಮೆಂಟ್ ಹಾಗೂ ಸ್ಕೂಲ್ ಮುಂದುಗಡೆ ಇರುವುದರಿಂದ ಜನದಟ್ಟನೆ ಜಾಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಅಪಾರ್ಟ್ ಮೆಂಟ್ ಎದುರುಗಡೆ ಉಬ್ಬು ರಸ್ತೆ ಇದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಎಲ್ಲಾ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿಯಲ್ಲ. ಐಎಂವಿ ವರದಿಯಲ್ಲಿ ದ್ವಿಚಕ್ರ ವಾಹನಕ್ಕೆ ಮುಂಭಾಗ ಜಖಂಗೊಂಡಿದೆ ಎಂದರೆ ಸರಿ. ಆಟೋರಿಕ್ಷಾ ಗೆ ಬಂಪರ್ ಮತ್ತು ಗ್ರೀಲ್ ಇರುವುದರಿಂದ ಯಾವುದೇ ರೀತಿಯಂ ಜಖಂ ಆಗಿಲ್ಲಎಂದರೆ ಸರಿಯಲ್ಲ. ಅರ್ಜಿದಾರರ

ಹಿಂದಿನಿಂದ ಬಂದು ಆಟೋಗೆ ಡಿಕ್ಕಿಪಡಿಸಿದದರೂ ಸಹ ದೂರುದಾರರ ಹೇಳಿಕೆ ಆಧಾರಿಸಿ ಆಟೋರಿಕ್ಷಾ ಚಾಲಕನ ವಿರುದ್ದ ತಪ್ಪಾಗಿ ದೋಪೆರೋಪಣಾಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆಟೋ ಚಾಲಕ ಅಪಘಾತದ ನಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿರುತ್ತಾನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ.ಬಿ.ಸಿ.ವಿ ವಕೀಲರಿಂದಃ</u>**

ಅಪಘಾತ ಆದ ಬಗ್ಗೆ ಆಸ್ಪತ್ರೆಯಿಂದ ನಮಗೆ ಮಾಹಿತಿ ಬಂದಿರುತ್ತದೆ. ದೂರುದಾರ ಪ್ರತ್ಯಕ್ಷಸಾಕ್ಷಿದಾರ ಅಲ್ಲ ಎಂದರೆ ಸರಿ. ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಗಾಯಾಳು ಆಟೋರಿಕ್ಷಾ ನಂಬರ್ ಹೇಳಿರುತ್ತಾರೆ ಎಂದರೆ ಸರಿ. ಅಪಘಾತದ ಪ್ರತ್ಯಕ್ಷ ಸಾಕ್ಷಿದಾರರು ಸಹ ಆಟೋರಿಕ್ಷಾ ನಂಬರ್ ನ್ನು ಹೇಳಿರುತ್ತಾರೆ ಎಂದರೆ ಸರಿ. ಐಎಂವಿ ಕಲಂ.133 ರಡಿ ನೊಟೀಸ್‌ಗೆ ಉತ್ತರ ನೀಡಿರುತ್ತಾರೆ. ಆರೋಪಿ ತಪ್ಪೊಪ್ಪಿಕೊಂಡು ನ್ಯಾಯಾಲಯದಲ್ಲಿ ದಂಡ ಪಾವತಿಸಿರುತ್ತಾರೆ. ಸಿಡಿಆರ್‌ರಲ್ಲಿ ಪೋನ್ ನಂಬರ್ ಗೆ ಕರೆ ಅಥವಾ ಸಂದೇಶ ಬಂದರೆ ಮಾತ್ರ ವ್ಯಾಪ್ತಿ ಪ್ರದೇಶ ಗೊತ್ತಾಗುತ್ತದೆ ಎಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ
ನ್ಯಾಯಾಧೀಶರು, ಬೆಂಗಳೂರು.**